ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಮಲಪ್ರಭ ನೀರಿನ ಕೊಳವೆಗಳು ಒಡೆದು ಹೋಗಿರುವುದು

ಶ್ರೀ ಅಶೋಕ ಕಾಟ್ವೆ : ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿಯೂ ಸಹ ನಾನು ಈ ಒಂದು ಹುಬ್ಬಳ್ಳಿ ಮತ್ತು ಧಾರವಾಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಎಂಟು ದಿವಸಕ್ಕೆ ಒಂದು ಸಾರಿ ನೀರು ಬಿಡುತ್ತಿದ್ದಾರೆ. ಮಲಪ್ರಭಾನದಿಯಿಂದ ಬರುವಂತಹ ನೀರಿನ ಕೊಳವೆಗಳು ತೂತು ಬಿದ್ದು ಸೋರುತ್ತಿವೆ. ಆದ್ದರಿಂದ ಕುಡಿಯುವ ನೀರು ಸಮರ್ಪಕವಾಗಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ-ಮುಖ್ಯಮಂತ್ರಿಗಳು) : ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರಿನ ಸುತ್ತಮುತ್ತಲ ಜಮೀನನ್ನು ಕೆಲವು ಪ್ರಭಾವಿ ವ್ಯಕ್ತಿಗಳು ವಶಪಡಿಸಿಕೊಳ್ಳುತ್ತಿರುವುದು

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕಂದಾಯ ಇಲಾಖೆ ಮತ್ತು ಬಿ.ಡಿ.ಎ. ವ್ಯಾಪ್ತಿಯಲ್ಲಿ ಬರತಕ್ಕಂಥ ಅನೇಕ ಸಾರ್ವಜನಿಕ ಕೆಲಸಗಳಿಗೆ ಮೀಸಲಾಗಿಟ್ಟಿರುವಂತಹ ಜಮೀನುಗಳು ಕೂಡ ಸಾಕಷ್ಟು ಇವೆ. ನಾನು ಕಳೆದ 6 ತಿಂಗಳ ಹಿಂದೆ ಈ ವಿಷಯವನ್ನು ಪ್ರಶ್ನೆಯ ಮೂಲಕ ಈ ಸದನದಲ್ಲಿ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಅನಧಿಕೃತವಾಗಿ ಕಟ್ಟುತ್ತಾ ಇರತಕ್ಕಂಥ ಯಾವುದೇ ಕಟ್ಟಡಗಳು ಆಗಲಿ ಅದೂ ಸಾರ್ವಜನಿಕ ಉದ್ದೇಶಕ್ಕೆ ಮೀಸಲಾಗಿಟ್ಟಿರತಕ್ಕಂಥ ಪ್ರದೇಶದಲ್ಲಿ ಕಟ್ಟುತ್ತಿರುವಂತಹ ಕಟ್ಟಡಗಳು ಸರ್ಕಾರದ ಗಮನಕ್ಕೆ ಬಂದಿದೆ ಅವುಗಳನ್ನು ತೆರವು ಮಾಡಿಸುತ್ತೇನೆ ಎನ್ನುವಂತಹ ಆಶ್ವಾಸನೆಯನ್ನು ಮಾನ್ಯ ಬಿ.ಡಿ.ಎ. ಸಚಿವರು ಕೊಟ್ಟಿದ್ದರು. ಅದೇ ಪ್ರಶ್ನೆಯನ್ನು ನಾನು ಇವತ್ತು ಕೇಳಬೇಕಾಗುತ್ತದೆ. ನಾನು ಇಲ್ಲಿ ಎರಡು ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. ಸರ್ವೆ ನಂಬರು 41, ಗೆದ್ದಲಹಳ್ಳಿಯಲ್ಲಿ ಬರುತ್ತದೆ. ಇದು ಶಾಲೆಗೋಸ್ಕರ ಮೀಸಲಾಗಿಟ್ಟಿರತಕ್ಕಂಥ ಜಾಗ. ಅಲ್ಲಿ ಆಟವಾಡುವುದಕ್ಕೂ ಜಾಗ ಇಲ್ಲ. ಅಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಬರುತ್ತಿವೆ. ಅಲ್ಲಿ 5 ಗುಂಟೆ ಜಮೀನು ಇದೆ. ಪೂರ್ತಿ ಕಟ್ಟಡ ಬರುತ್ತಿದೆ. ನಮ್ಮ ಮಾನ್ಯಮಂತ್ರಿಗಳು ಆ ಜಾಗದ ಪಕ್ಕದಲ್ಲಿಯೇ ಅವರ ಕಟ್ಟಡಕ್ಕೆ ಹೋಗಬೇಕಾಗುತ್ತದೆ. ಅದನ್ನು ತೆರವು ಮಾಡಿಸುವಂತಹ ಕೆಲಸ ಇದುವರೆಗೂ ಮಾಡಿಲ್ಲ.

3.40 ಪಿ.ಎಂ

ಈ ಕುರಿತು ಸದನದಲ್ಲಿ ಉತ್ತರ ಕೊಡುವಂಥ ಸಂದರ್ಭದಲ್ಲಿ ತೆರವು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಸರ್ವೇ ನಂಬರ್ 32ರಲ್ಲಿ, ಪಿ.ಅಂಡ್.ಟಿ. ಕಾಲನಿಯಲ್ಲಿ ಸುಮಾರು 12,000 ಚದರ ಅಡಿ ಇರತಕ್ಕಂಥ ಒಂದು ಜಾಗದಲ್ಲಿ ಒಂದು ಕಮರ್ಷಿಯಲ್ ಕಾಂಪ್ಲೆಕ್ಸ್ ಬರುತ್ತಾ ಇದೆ. ಅದರಲ್ಲಿ ಯಾವುದೇ ತಡೆಯಾಜ್ಞೆಯಾಗಲೀ, ಇನ್ನಾವುದೇ ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಅದನ್ನು ಯಾವರೀತಿಯಲ್ಲಿ ಖುಲಾಸೆ ಮಾಡುತ್ತೀರಿ ಎಂದು ಗೊತ್ತಿಲ್ಲ ಅದಕ್ಕೆ ತಾವುಗಳು ಒಂದು ಉತ್ತರವನ್ನು ಕೂಡ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಸರ್ವೇ ನಂಬರ್ 65:6 - ನಾಗಶೆಟ್ಟಿಹಳ್ಳಿಯಲ್ಲಿ ಇರತಕ್ಕಂಥಾದ್ದು ಅದನ್ನು ಸಿವಿಕ್ ಅಮಿನಿಟೀಸ್‌ಗಾಗಿ ಮೀಸಲು ಇಟ್ಟಿರತಕ್ಕಂಥ ಒಂದು ಜಾಗ.

ಆ ಜಾಗದಲ್ಲಿ ಕಾಂಪೌಂಡ್ ಹಾಕಿ ಕಟ್ಟಡ ಕಟ್ಟತಕ್ಕಂಥ ಕೆಲಸವನ್ನು ಮಾಡುತ್ತಾ ಇದ್ದಾರೆ. ನಾನು ಸ್ವತಃ ನಿನ್ನೆ ಅದನ್ನು ನೋಡಿದ್ದೇನೆ. ಇದು ಬಿ.ಡಿ.ಎ. ಹಾಗೂ ಕಂದಾಯ ಸಚಿವರಿಗೆ ಬರತಕ್ಕಂಥ ವಿಚಾರ. ಈ ಬಗ್ಗೆ ಬಿಡಿಎ ದವರನ್ನು ಕೇಳಿದರೆ ಖರಾಬ್‌ಲ್ಯಾಂಡ್ ಎಂದು ಹೇಳುತ್ತಾರೆ. ಹಾಗಾದರೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರತಕ್ಕಂಥ ಖರಾಬ್‌ಲ್ಯಾಂಡ್‌ನ ಪರಿಸ್ಥಿತಿ ಏನು? ಅದನ್ನು ನೀವು ಬಿಡಿಎ ದವರಿಗೆ ಹಸ್ತಾಂತರವನ್ನೇನಾದರೂ ಮಾಡಿದ್ದೀರೋ? ಅಥವಾ ಇಲ್ಲವೇ? ಎನ್ನುವ ಬಗ್ಗೆ ನೀವು ಉತ್ತರವನ್ನು ಕೊಡಬೇಕು. ಅನಧಿಕೃತವಾಗಿ ಕಟ್ಟಿರತಕ್ಕಂಥವನ್ನು ನಿಲ್ಲಿಸುವ ಮತ್ತು ಕಟ್ಟಿದ್ದನ್ನು ಕೆಡವುವ ಕೆಲಸವನ್ನು ಮಾಡಬೇಕು ಎಂಬ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರದೇಶದ ಸುತ್ತಮುತ್ತ ಇರುವ ಸರಕಾರಿ ಜಮೀನುಗಳ ಬಗ್ಗೆ ಹಾಗೂ ಸಾರ್ವಜನಿಕರ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಕೆಲವು ಜಮೀನುಗಳನ್ನು ಪ್ರಭಾವಿ ವ್ಯಕ್ತಿಗಳು ಮತ್ತು ಗೃಹನಿರ್ಮಾಣ ಸಂಘದವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಭೂಮಿ ಕಬಳಿಸಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಬೆಂಗಳೂರು ಜಿಲ್ಲಾಧಿಕಾರಿಗಳು ಈಗಾಗಲೇ 85 ಪ್ರಕರಣಗಳಲ್ಲಿ ಒಟ್ಟು 1,452 ಎಕರೆ, 13 ಗುಂಟೆ ವಿಸ್ತೀರ್ಣವುಳ್ಳ ಜಮೀನುಗಳ ಬಗ್ಗೆ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ-136; 3ರ ಅನ್ವಯ ನಕಲಿ ದಾಖಲೆಗಳನ್ನು ವಜಾ ಮಾಡಿ ಈಗಾಗಲೇ ಸರಕಾರವು ಮುಟ್ಟುಗೋಲು ಹಾಕಿಕೊಂಡು ಕಂದಾಯ ದಾಖಲೆಗಳಲ್ಲಿ ಸೂಕ್ತ ಬದಲಾವಣೆಯನ್ನು ಮಾಡಿರುತ್ತಾರೆ. ಈ ಬಗ್ಗೆ ಉಪ-ನೋಂದಣಾಧಿಕಾರಿಗಳಿಗೂ ಕೂಡ ಸೂಕ್ತ ಕ್ರಮವನ್ನು ಜರುಗಿಸಲು ತಿಳಿಸಲಾಗಿದೆ. ಇನ್ನು33ಪ್ರಕರಣಗಳಲ್ಲಿ ವಿಚಾರಣೆ ನಡೆಸಲಾಗುತ್ತಿದ್ದು ನಕಲಿ ದಾಖಲೆಗಳನ್ನು ಸೃಷ್ಟಿಸಲು ಕಾರಣಕರ್ತರಾದವರ ಮೇಲೆ ಕ್ರಿಮಿನಲ್ ಮೊಕದ್ದಮೆ ಮಾಡಲು ಬಿಎಂಟಿಎಂ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ. ಬೆಗಂಳೂರು ಜಿಲ್ಲೆಯಲ್ಲಿರುವ ಪ್ರತಿ ತಾಲ್ಲೂಕಿನಲ್ಲಿರುವ ಸರಕಾರಿ ಜಮೀನುಗಳ ಪಟ್ಟಿಯನ್ನು ತಯಾರಿಸಿ ಎ.ಸಿ. ಮಟ್ಟದ ಅಧಿಕಾರಿಗಳು ತಪಾಸಣೆ ಮಾಡಿ, ಸ್ಟೇಟಸ್ ರಿಪೋರ್ಟ್ ನೀಡಿತ್ತು. ಈ ಬಗ್ಗೆ ದೃಢೀಕೃತ ರಿಜಿಸ್ಟರ್ ತಯಾರಿಸಲಾಗಿದೆ. ಹಾಗೂ ಈಗಾಗಲೇ ಸರಕಾರವು ಮುಟ್ಟುಗೋಲು ಹಾಕಿಕೊಂಡಿರುವ ಪ್ರಕರಣಗಳಲ್ಲಿ ಕೆಲವರು ಉಚ್ಚನ್ಯಾಯಾಲಯದ ಮೊರೆ ಹೋಗಿ ರಿಟ್ ದಾಖಲೆ ಮಾಡಿರುತ್ತಾರೆ. ಕೆಲವು ಪ್ರಕರಣಗಳಲ್ಲಿ ಬಿಎಂಟಿಎಫ್ ಸಹಾಯದಿಂದ ಅತಿಕ್ರಮಣವನ್ನು ಖಿಲ್ಲಾಪಡಿಸಲಾಗಿದೆ. ಗೆದ್ದಲಹಳ್ಳಿ ಸರ್ವೇ ನಂಬರ್-41ರಲ್ಲಿ ಒಟ್ಟು1 ಎಕರೆ,20ಗುಂಟೆ ವಿಸ್ತೀರ್ಣವಿದ್ದು, ಸರಕಾರಿ ಜಮೀನು ಎಂದು ವರ್ಗೀಕೃತವಾಗಿರುತ್ತದೆ. ಅಲ್ಲಿ ಹಾಲಿ ಸರಕಾರಿ ಪಾಠಶಾಲೆ ಇದ್ದು, ಇನ್ನಿತರ ಅಕ್ರಮ ಕಟ್ಟಡಗಳು ಇದ್ದು ಈ ಬಗ್ಗೆ ಖಿಲ್ಲಾಪಡಿಸಲು ಕಾನೂನಿನನ್ವಯ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಪಿ.ಅಂಡ್‌ಟಿ. ಬಡಾವಣೆಗೆ ಸಂಬಂಧಪಟ್ಟಂತೆ ಹಾಗೂ ನಾಗಶೆಟ್ಟಿಹಳ್ಳಿ ಸರ್ವೆ ನಂಬರ್ 65-6ರಲ್ಲಿ ಸಿ.ಎ.ಸೈಟ್‌ಗಳು ಅತಿಕ್ರಮಣವಾಗಿದ್ದು, ಈ ಬಗ್ಗೆ ಬಿಡಿಎ ಪ್ರಾಧಿಕಾರದ ವಿಧಿಯಲ್ಲಿ ಬರುತ್ತಿದ್ದು, ಪ್ರಾಧಿಕಾರದವರು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೇ, 1996ರಲ್ಲಿ ಇದೇ ಉತ್ತರವನ್ನು ಕೊಟ್ಟಿದ್ದರು, ಈಗಲೂ ಅದೇ ಉತ್ತರವನ್ನುಕೊಟ್ಟಿದ್ದಾರೆ. ಉತ್ತರದಲ್ಲಿ ಯಾವ ಬದಲಾವಣೆಯೂ ಇಲ್ಲ. ಆವೊತ್ತು ಕೊಟ್ಟ ಉತ್ತರವನ್ನು ತಮಗೆ ತಂದು ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : 1996 ರಿಂದ ಎಷ್ಟು ಅಭಿವೃದ್ಧಿಯಾಗಿದೆ ಎಂದು ಗಮನಿಸಬೇಕು. ಈಗಾಗಲೇ ಅಂಥ ಕೆಲವು ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡು ಕಂದಾಯ ದಾಖಲೆಗಳಲ್ಲಿ ನಾವು ಬದಲಾವಣೆ ತಂದಿದ್ದೇವೆ.

ಪಿ.ಯು.ಸಿ. ಮೊದಲನೇ ವರ್ಷದಲ್ಲಿ ಅನುತ್ತೀರ್ಣನಾದರೆ ಆತನ ಮುಂದಿನ ತರಗತಿಗೆ ಹೋಗದಿರುವ ವಿಚಾರ.

ಶ್ರೀ ಡಿ.ವಿ. ಸದಾನಂದಗೌಡ : ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿರುವಂಥ ಪದವಿಕಾಲೇಜುಗಳಲ್ಲಿ, ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಮುಂತಾಗಿ ಎಲ್ಲಾ ಕಾಲೇಜುಗಳಲ್ಲಿಯೂ ಕೂಡ ಒಬ್ಬ ವಿದ್ಯಾರ್ಥಿಯು ಮೊದಲನೇ ವರ್ಷಕ್ಕೆ ಪರೀಕ್ಷೆ ಕುಳಿತು ಯಾವುದಾದರೂ ಸಬ್‌ಜೆಕ್ಟ್‌ನಲ್ಲಿ ಅನುತ್ತೀರ್ಣನಾದರೆ ಅವನನ್ನು ಮುಂದಿನ ವರ್ಷದ ತರಗತಿಗೆ ಕಳುಹಿಸುವಂಥ ಪದ್ಧತಿಯೂ ನಮ್ಮಲ್ಲಿದೆ. ಆದರೆ, ದುರಾದೃಷ್ಟವಶಾತ್ ಪಿ.ಯು.ಸಿ. ಮೊದಲನೇ ವರ್ಷದಲ್ಲಿ ಮಾತ್ರ ಒಬ್ಬ ವ್ಯಕ್ತಿ ಕೆಲವು ಸಬ್‌ಜೆಕ್ಟ್‌ಗಳಲ್ಲಿ ಅನುತ್ತೀರ್ಣನಾದರೆ ಆತನು ಮುಂದಿನ ತರಗತಿಗೆ ಹೋಗುವ ಹಾಗಿಲ್ಲ, ಅಲ್ಲಿ ಮಾತ್ರ ಪ್ರಮೋಷನ್ ಅಥವಾ ಕ್ಯಾರಿಓವರ್ ಪದ್ಧತಿಯೂ ಇಲ್ಲ. ಇವೊತ್ತು ಸಾಮಾನ್ಯವಾಗಿ ಸಾವಿರಾರು ಬಡಕುಟುಂಬಗಳವರು ಕೂಡ ಕನಿಷ್ಟ ಪಿಯುಸಿ ಶಿಕ್ಷಣವನ್ನು ಕಲಿಸುವ ಉದ್ದೇಶದಿಂದ ಶಾಲೆಗೆ ಕಳುಹಿಸುತ್ತಾರೆ. ಅಂಥ ಮಕ್ಕಳು ಪಿಯುಸಿಯಲ್ಲಿ ಅಪ್ಪಿತಪ್ಪಿ ಪ್ರಥಮವರ್ಷದಲ್ಲಿ ಒಂದೋ ಎರಡೋ ಸಬ್ಜೆಕ್ಟ್‌ನಲ್ಲಿ ಅನುತ್ತೀರ್ಣರಾದರೆ, ಅವರು ಎರಡನೇ ವರ್ಷಕ್ಕೆ ಹೋಗಲು ಕ್ಯಾರಿಓವರ್ ಪದ್ಧತಿ ಇಲ್ಲದ ಕಾರಣ ಅವರುಗಳ ಭವಿಷ್ಯವೇ ಹಾಳಾಗುತ್ತಿರುವಂಥ ಪರಿಸ್ಥಿತಿಯು ಇದೆ. ಎಲ್ಲಾ ಡಿಗ್ರಿಕೋರ್ಸ್‌ಗಳಲ್ಲಿ ಕ್ಯಾರಿಓವರ್ ಪದ್ಧತಿಯು ಇರುವಾಗ ಪಿಯುಸಿಗೂ ಕೂಡ ಅದನ್ನು ಜಾರಿಗೆ ತಂದರೆ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣವಾಗುತ್ತದೆ ಮತ್ತು ಗ್ರಾಮಾಂತರದಲ್ಲಿರುವಂಥ ಮಕ್ಕಳು ಕನಿಷ್ಠ ಪಿಯುಸಿ ವರೆಗೆ ಕಲಿಯಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ, ಪ್ರಥಮ ವರ್ಷದಲ್ಲಿ ವಿದ್ಯಾರ್ಥಿಯು ಒಂದು ಅಥವಾ ಎರಡು ಸಬ್ಜೆಕ್ಟ್‌ನಲ್ಲಿ ಅನುತೀರ್ಣನಾದರೆ ಎರಡನೇ ವರ್ಷಕ್ಕೆ ಕ್ಯಾರಿಓವರ್ ಮಾಡಲು ಸೌಲಭ್ಯ ಇರಬೇಕು. ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವ ಹಾಗೆ ಬಿ.ಎ., ಬಿ.ಎಸ್.ಸಿ, ಇಂಜಿನಿಯರಿಂಗ್, ಮೆಡಿಕಲ್ ಪದವಿಗಳಲ್ಲಿ ಕ್ಯಾರಿಓವರ್ ಪದ್ಧತಿ ಇದೆ. ಆದರೆ, ಮೊದಲವರ್ಷದ ಪಿಯುಸಿಯಲ್ಲಿ ಕ್ಲಾಸ್ ಎಕ್ಸಾಮಿನೇಶನ್ ಇರುತ್ತದೆ. ಪಬ್ಲಿಕ್ ಎಕ್ಸಾಮಿನೇಶನ್ ಇರುವುದಿಲ್ಲ. ಪ್ರಥಮ ವರ್ಷದಲ್ಲಿ ಬಹುತೇಕ 99ಪರ್ಸೆಂಟ್ ವಿದ್ಯಾರ್ಥಿಗಳು ಪಾಸ್ ಆಗುತ್ತಾರೆ. ಆದ್ದರಿಂದ, ಅದರಲ್ಲಿಯೂ ಕ್ಯಾರಿಓವರ್ ಸಿಸ್ಟಂನ್ನು ಮಾಡಲು ಆಗುವುದಿಲ್ಲ. ಹಾಗೇನಾದರೂ ಮಾಡಿದರೆ ಕ್ಲಾಸ್ ಎಕ್ಸಾಮಿನೇಶನ್‌ನಲ್ಲಿ ಯಾರು ಚೆನ್ನಾಗಿ ಅಭ್ಯಾಸ ಮಾಡಿ ಹಾಜರಾಗಿರುವುದಿಲ್ಲ ಅವರು ಕೂಡ ಅನುತ್ತೀರ್ಣರಾಗುತ್ತಾರೆ. ಆದ್ದರಿಂದ ಅವರಿಗೇ ತೊಂದರೆಯಾಗುತ್ತದೆ.